ನಿಮ್ಮೊಡನೆ

# ಪ್ರೇಮವೆನಲು ಹಿಂಸೆಯೆ?

ಪ್ರೇಮಿಸುವವರು ಹಿಂಸ್ರಕರಾಗಲಾರರು. ಹೆಣ್ಣು ಮತ್ತು ಗಂಡು ಪರಸ್ಪರ ಹೊಂದಿಕೊಂಡು ಬಾಳುವ ಪ್ರೇಮದ ಪ್ರಕ್ರಿಯೆಯಲ್ಲಿ, ಇಬ್ಬರ ವ್ಯಕ್ತಿತ್ವಗಳೂ ಹೊಳಪು ಕಂಡುಕೊಳ್ಳುತ್ತವೆಯೇ ಹೊರತು, ಕಿಲುಬುಗಟ್ಟುವುದಿಲ್ಲ. ಪ್ರೇಮಿಯೊಬ್ಬ ಕೊಲೆಗಾರನಾಗುವುದೆಂದರೆ, ಪ್ರೇಮದ ಕುರಿತಂತೆ ಆ ವ್ಯಕ್ತಿಯ ಗ್ರಹಿಕೆಯಲ್ಲೇ ಐಬಿದೆ ಎಂದರ್ಥ.

ರಾಜ್ಯದ ವಿವಿಧ ಭಾಗಗಳಲ್ಲಿ ಮೂವರು ಯುವತಿಯರು ಕೊಲೆಗೀಡಾಗಿದ್ದು; ಆ ತರುಣಿಯರನ್ನು ಪ್ರೇಮಿಸುತ್ತಿದ್ದ ಹುಡುಗರೇ ಅವರನ್ನು ಕೊಂದಿದ್ದಾರೆ ಎನ್ನಲಾಗಿದೆ. ಪ್ರೇಮದ ಹೆಸರಿನಲ್ಲಿ ನಡೆದಿರುವ ಈ ಕೊಲೆಗಳು ಆತಂಕ ಹುಟ್ಟಿಸುವಂತಿವೆ. ಮಾನವೀಯ ಸಂವೇದನೆಗಳು ಕ್ಷೀಣಗೊಂಡು ಯುವಜನರ ಗುಂಪೊಂದು ಕ್ರೌರ್ಯವನ್ನು ಆವಾಹಿಸಿಕೊಂಡಿರುವ ಸಾಧ್ಯತೆಯನ್ನು ಹಾಗೂ ಈ ಕೊಲೆಗಳು ಪ್ರೇಮದ ಕುರಿತು ಅವರ ಗ್ರಹಿಕೆಯಲ್ಲೇ ಲೋಪವಿರುವುದನ್ನು ಸೂಚಿಸುವಂತಿವೆ.

ಹುಬ್ಬಳ್ಳಿಯಿಂದ ವರದಿಯಾಗಿರುವ ಪ್ರಕರಣದಲ್ಲಿ ನತದೃಷ್ಟ ತರುಣಿಯನ್ನು ಕೊಲೆಗಾರ 14 ಬಾರಿ ಚುಚ್ಚಿ ಕೊಂದಿದ್ದಾನೆ. ಮತ್ತೊಬ್ಬ ತರುಣಿಯೂ ಇರಿತಕ್ಕೊಳಗಾಗಿ ಸಾವಿಗೀಡಾದ ಘಟನೆ ಹುಬ್ಬಳ್ಳಿಯಿಂದಲೇ ವರದಿಯಾಗಿದೆ. ಕೊಡಗು ಜಿಲ್ಲೆಯ ಸೋಮವಾರಪೇಟೆಯ ಸೂರ್ಲಬ್ಬಿಯಲ್ಲಿ ಕೊಲೆಗೀಡಾದ ಹುಡುಗಿಯ ತಲೆಯನ್ನು ಕತ್ತರಿಸಿ, ರುಂಡವನ್ನು ಕಾಡಿನಲ್ಲಿ ಅಡಗಿಸಿಡಲಾಗಿತ್ತು. ಈ ಮೂರೂ ಪ್ರಕರಣಗಳಲ್ಲಿ ಆರೋಪಿ ಸ್ಥಾನದಲ್ಲಿರುವವರು ಹದಿಹರೆಯದ ಯುವಕರು ಹಾಗೂ ಸಾವಿಗೀಡಾದವರ ನಿಕಟ ಸಂಪರ್ಕದಲ್ಲಿದ್ದವರು. ಯುವತಿಯರ ದಾರುಣ ಕೊಲೆಗಳಿಗೆ ಪ್ರೇಮ ನಿರಾಕರಣೆಯೇ ಕಾರಣ ಎಂದು ಹೇಳಲಾಗುತ್ತಿದೆ. ಕಾರಣವೇನೇ ಇದ್ದರೂ ಜೀವ ತೆಗೆಯುವ ಮನಸ್ಥಿತಿಯನ್ನು ನಾಗರಿಕ ವ್ಯವಸ್ಥೆಯಲ್ಲಿ ಒಪ್ಪಿಕೊಳ್ಳಲಾಗದು. ಪ್ರೇಮದ ಹೆಸರಿನಲ್ಲಿ ನಡೆಯುವ ಕೊಲೆಗಳು, ಆ್ಯಸಿಡ್ ಎರಚುವಿಕೆಯಂತಹ ಹಿಂಸ್ರ ಕೃತ್ಯಗಳ ಮನೋವಿಕಾರ ಗಾಬರಿ ಹುಟ್ಟಿಸುವಂತಹದ್ದು.

ಪ್ರೇಮದಿಂದ ಮನಸ್ಸು ಆರ್ದ್ರಗೊಳ್ಳಬೇಕು; ತನ್ನ ಕಾಠಿಣ್ಯವನ್ನು ಕಳೆದುಕೊಂಡು ಹೆಚ್ಚು ಮಾನವೀಯವಾಗಬೇಕು. ಆದರೆ, ಪ್ರೇಮದ ಹೆಸರಿನಲ್ಲಿ ಪ್ರೇಮಿಸಿದ ಜೀವದ ಕೊಲೆಯಾಗುತ್ತದೆಂದರೆ, ಅದನ್ನು ಪ್ರೇಮವೆನ್ನುವುದು ಸಾಧ್ಯವಿಲ್ಲ. ಪ್ರೇಮಿಸುವವರು ಹಿಂಸ್ರಕರಾಗಲಾರರು. ಜಗತ್ತು ಕೊಂಡಾಡುತ್ತಾ ಬಂದಿರುವ ಯಾವ ಪ್ರೇಮಕಥೆಯಲ್ಲೂ ಹಿಂಸೆಯಿಲ್ಲ. ಪ್ರೇಮಿಗಳು ತ್ಯಾಗಿಗಳಾಗಬಲ್ಲರು. ಕರುಣಾಮಯಿಗಳಾಗಬಲ್ಲರು. ಇದರರ್ಥ ಇಷ್ಟೇ: ಪ್ರೇಮ ಮಾನವೀಯತೆಯ ಮತ್ತೊಂದು ಹೆಸರು. ಹೆಣ್ಣು ಮತ್ತು ಗಂಡು ಪರಸ್ಪರ ಹೊಂದಿಕೊಂಡು ಬಾಳುವ ಪ್ರೇಮದ ಪ್ರಕ್ರಿಯೆಯಲ್ಲಿ, ಇಬ್ಬರ ವ್ಯಕ್ತಿತ್ವಗಳೂ ಹೊಳಪು ಕಂಡುಕೊಳ್ಳುತ್ತವೆಯೇ ಹೊರತು, ಕಿಲುಬುಗಟ್ಟುವುದಿಲ್ಲ.

ಪ್ರೇಮಿಯೊಬ್ಬ ಕೊಲೆಗಾರನಾಗುವುದೆಂದರೆ, ಪ್ರೇಮದ ಕುರಿತಂತೆ ಆ ವ್ಯಕ್ತಿಯ ಗ್ರಹಿಕೆಯಲ್ಲೇ ಐಬಿದೆ ಎಂದರ್ಥ. ಕೊಲೆಗಾರನೊಬ್ಬ ಪ್ರೇಮಿಯಾಗಲಾರ. ಕೊಲೆಗಾರನನ್ನು ಪ್ರೇಮಿಯೆಂದು ಕರೆಯುವುದು ಪ್ರೇಮಕ್ಕೆ ಎಸಗುವ ಅಪಚಾರ. ಸದ್ಯದ ಘಟನೆಗಳಲ್ಲಿನ ಕ್ರೌರ್ಯವನ್ನು ವ್ಯಕ್ತಿಗತ ನೆಲೆಗಟ್ಟಿನಲ್ಲಷ್ಟೇ ನೋಡಲಾಗದು. ಆ ಹಿಂಸೆ, ಸಮಾಜದಲ್ಲಿ ಅಂತರ್ಗತವಾಗಿರುವ ಹಿಂಸೆಯ ಸ್ವರೂಪವನ್ನೂ ಸೂಚಿಸುವಂತಿದೆ. ಈ ಕೃತ್ಯಗಳು, ಹೊಸ ತಲೆಮಾರಿಗೆ ನೈತಿಕತೆಯನ್ನು ಕೊಡುಗೆಯಾಗಿ ನೀಡುವಲ್ಲಿ ಸೋತಿರುವ ಸಮಾಜದ ಆತ್ಮವಿಮರ್ಶೆಗೆ ಒತ್ತಾಯಿಸುವಂತಿವೆ. ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದಂತೆ ಪೋಷಕರ ಕಾಳಜಿ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಆಗಬೇಕಾದ ಬದಲಾವಣೆಗಳ ಕುರಿತೂ ನಾವು ಯೋಚಿಸಬೇಕಾಗಿದೆ.

ಯುವಕರ ಮನೋವಿಕಾರಗಳ ಹಿಂದೆ ಸಂವೇದನಾಶೂನ್ಯ ಸಿನಿಮಾಗಳ ಪ್ರಭಾವ ಇರುವುದನ್ನು ಅಲ್ಲಗಳೆಯುವಂತಿಲ್ಲ. ಪ್ರೇಮಿಸುವಂತೆ ಯುವತಿಯರನ್ನು ಒತ್ತಾಯಿಸುವ ಕಥೆಗಳನ್ನೊಳಗೊಂಡ ಸಿನಿಮಾಗಳ ಪರಂಪರೆಯೊಂದು ವ್ಯಾಪಾರಿ ಸಿನಿಮಾಗಳ ಹೆಸರಿನಲ್ಲಿ ಚಾಲ್ತಿಯಲ್ಲಿದೆ. ಯುವಕರ ಒರಟುತನ ಹಾಗೂ ಪಶು ಪ್ರವೃತ್ತಿಯನ್ನು ಹೀರೋಯಿಸಂ ರೂಪದಲ್ಲಿ ಬಿಂಬಿಸುವ ಸಿನಿಮಾಗಳು ಯುವಜನರನ್ನು ತಪ್ಪುದಾರಿಗೆಳೆಯುವ ಸಾಧ್ಯತೆ ಇದ್ದೇ ಇದೆ. ಇದರ ಜೊತೆಗೆ ಇಡೀ ಸಮಾಜವೇ ಸಿನಿಮೀಯವಾಗಿದ್ದು, ಮಹಿಳೆಯರ ಬಗೆಗಿನ ದೌರ್ಜನ್ಯದ ಘಟನೆಗಳು ನಿತ್ಯವೂ ವರದಿಯಾಗುತ್ತಿವೆ. ದೈಹಿಕ ಹಿಂಸೆಯ ಕೆಲವು ಘಟನೆಗಳಷ್ಟೇ ವರದಿಯಾಗುತ್ತಿದ್ದು, ಬೆಳಕಿಗೆ ಬಾರದ ಪ್ರಕರಣಗಳ ಸಂಖ್ಯೆ ದೊಡ್ಡದಿದೆ. ಹಿಂಸೆ ಎಂದು ಗುರ್ತಿಸಲು ಸಾಧ್ಯವಾಗದಷ್ಟು ಮಟ್ಟಿಗಿನ ನಾಜೂಕಾದ ಮಾನಸಿಕ ವಿಕಾರಗಳೂ ಸಮಾಜದಲ್ಲಿವೆ. ಹೆಣ್ಣನ್ನು ಸರಕಿನಂತೆ, ಭೋಗದ ವಸ್ತುವಿನಂತೆ ನೋಡುವ ಮನಸ್ಥಿತಿ ಆತಂಕ ಹುಟ್ಟಿಸುವಂತಹದ್ದು. ಹೆಣ್ಣಿನ ಕುರಿತ ದೃಷ್ಟಿಕೋನದಲ್ಲಿನ ಬದಲಾವಣೆ ನಿರಂತರವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಆಗಬೇಕಾದ ಬದಲಾವಣೆ.

ತರುಣಿಯರ ದುರಂತ ಅಂತ್ಯದ ಪ್ರಕರಣಗಳನ್ನು ರಾಜಕಾರಣಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ವಿಶ್ಲೇಷಿಸುತ್ತಿರುವುದು ಆತಂಕ ಉಂಟುಮಾಡುವ ಸಂಗತಿ. ಕೊಲೆಗೀಡಾದ ಹಾಗೂ ಕೊಂದ ವ್ಯಕ್ತಿಯ ಜಾತಿಗೂ, ಜನಪ್ರತಿನಿಧಿಗಳ ಸಂವೇದನೆಯ ತೀವ್ರತೆಗೂ ಸಂಬಂಧವಿರುವುದು ದುರದೃಷ್ಟಕರ.

ಯಾವುದೇ ಜನಪರ ರಾಜಕಾರಣಿ ಓರ್ವ ಪ್ರೇಮಿಯೇ ಆಗಿರುತ್ತಾನೆ. ಸಮಾಜವನ್ನು ತನ್ನ ಕುಟುಂಬದಂತೆ ಪ್ರೇಮಿಸದ ವ್ಯಕ್ತಿ ರಾಜಕಾರಣಿಯ ಹೆಸರಿನ ವ್ಯಾಪಾರಿ ಅಥವಾ ಪುಢಾರಿ ಆಗಿರುತ್ತಾನಷ್ಟೇ. ವರ್ತಮಾನದ ರಾಜಕಾರಣದಲ್ಲಿ ವ್ಯಾಪಾರಿ ಮನಸ್ಥಿತಿಯೇ ಮುನ್ನೆಲೆಯಲ್ಲಿದ್ದು, ಪ್ರೇಮದ ಮೌಲ್ಯ ಅಪ್ರಸ್ತುತ ಎನ್ನುವಂತಾಗಿದೆ. ರಾಜಕಾರಣಿಗಳು ಪ್ರೇಮದ ಮೌಲ್ಯದಿಂದ ವಿಮುಖಗೊಂಡಿರುವುದು ರಾಜಕಾರಣದಲ್ಲಿನ ರಾಡಿಗೆ ಪ್ರಮುಖ ಕಾರಣಗಳಲ್ಲೊಂದಾಗಿದೆ.

ಯಾವುದೇ ಅಸಹಜ ಸಾವು ನಮ್ಮಲ್ಲಿ ಕಳವಳ ಹುಟ್ಟಿಸಬೇಕು. ಎಲ್ಲೋ ಅಳುತ್ತಿರುವ ಮಗುವಿನ ಸಂಕಟಕ್ಕೂ ನಮ್ಮ ಹೃದಯಗಳು ಸ್ಪಂದಿಸಬೇಕು. ಅದು ಸಾಧ್ಯವಾಗದೆ ಹೋಗುವ ಪರಿಸ್ಥಿತಿಗಿಂತಲೂ ಮಿಗಿಲಾದ ಮಾನವ ಕಲ್ಪಿತ ದುರಂತ ಮತ್ತೊಂದಿಲ್ಲ.

■ **ರಘುನಾಥ ಚ.ಹ.**



ಈಶ್ವರ್